I/503157/2023

**ಕರ್ನಾಟಕ ಸರ್ಕಾರ**
**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

ಸಂ: DTE-CDC0LRDC/13/2023

ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು-560001,
ದಿನಾಂಕ: 21/10/2023.

**2023-24ನೇ ಸಾಲಿನಲ್ಲಿ "44ನೇ ರಾಜ್ಯಮಟ್ಟದ ಅಂತರ ಪಾಲಿಟೆಕ್ನಿಕ್ ಕ್ರೀಡಾಕೂಟದಲ್ಲಿ ಭಾಗವಹಿಸುವ ಸಂಸ್ಥೆಗಳು ಮತ್ತು ಕ್ರೀಡಾಪಟುಗಳಿಗೆ ಸೂಚನೆಗಳು:-**

1. ಕ್ರೀಡಾಕೂಟದಲ್ಲಿ ಭಾಗವಹಿಸುವ ಸರ್ಕಾರಿ/ಅನುದಾನಿತ/ಖಾಸಗಿ ಸಂಸ್ಥೆಗಳು ಅರ್ಜಿಯನ್ನು ತಿಳಿಸಿರುವಂತಹ Google Form Link ಮುಖೇನ ದಿನಾಂಕ: 27.10.2023 ರೊಳಗೆ ನೋಂದಾಯಿಸತಕ್ಕದ್ದು.
2. ಸಂಸ್ಥೆಯಿಂದ ರಾಜ್ಯಮಟ್ಟದ ಅಂತರಪಾಲಿಟೆಕ್ನಿಕ್ ಕ್ರೀಡಾಕೂಟಕ್ಕಾಗಿ ಸ್ಪರ್ಧಾಳುಗಳನ್ನು ಆಯ್ಕೆಮಾಡುವಾಗ ವಿದ್ಯಾರ್ಥಿ/ವಿದ್ಯಾರ್ಥಿನಿಯರ ಕ್ರೀಡಾ ಪ್ರತಿಭೆಯನ್ನು ಗುರುತಿಸಿದ ಕ್ರೀಡಾಪಟುಗಳ ಹೆಸರು/ಹೆಸರಿನ ಪಟ್ಟಿಯನ್ನು ಕಳುಹಿಸಬೇಕು.
3. ಸ್ಪರ್ಧೆಗಳು ನಡೆಯುವಾಗ ನಿಗದಿತ ಅಂಕಣದಲ್ಲಿ ಸ್ಪರ್ಧಾಳುಗಳು ಇರುವಂತೆ ನೋಡಿಕೊಳ್ಳುವುದು ಉಸ್ತುವಾರಿ ವಹಿಸಿದ ಸಂಸ್ಥೆಗಳ ಉಪನ್ಯಾಸಕರ / ತಂಡದ ವ್ಯವಸ್ಥಾಪಕರ ಮುಖ್ಯ ಜವಾಬ್ದಾರಿಯಾಗಿರುತ್ತದೆ.
4. ಒಂದು ಸಂಸ್ಥೆಯಿಂದ ಒಂದು ಸ್ಪರ್ಧೆಗೆ ಒಬ್ಬ ಕ್ರೀಡಾಪಟುವಿಗೆ ಮಾತ್ರ ಭಾಗವಹಿಸಲು ಅವಕಾಶವಿರುತ್ತದೆ.
5. ಸಂಸ್ಥೆಯಿಂದ ಭಾಗವಹಿಸುವ ಒಬ್ಬ/ಒಬ್ಬಳು ಕ್ರೀಡಾಪಟು ಮೂರಕ್ಕಿಂತ ಹೆಚ್ಚು ಕ್ರೀಡೆಗಳಲ್ಲಿ ಭಾಗವಹಿಸುವಂತಿಲ್ಲ. (1 ಟ್ರ್ಯಾಕ್, 2 ಫೀಲ್ಡ್ ಅಥವಾ 2 ಟ್ರ್ಯಾಕ್, 1 ಫೀಲ್ಡ್)
6. ವಿಶೇಷ ಚೇತನ ಕ್ರೀಡಾಪಟುಗಳಿಗೆ ಮಾತ್ರ ಒಂದು ಸ್ಪರ್ಧೆಗೆ ಒಂದು ಸಂಸ್ಥೆಯಿಂದ ಇಬ್ಬರಿಗೆ ಅವಕಾಶವಿರುತ್ತದೆ.
7. ವಿಶೇಷ ಚೇತನ ಕ್ರೀಡಾಪಟುಗಳು ಸ್ಪೀಡೋ ಮೀಟರ್ ಇಲ್ಲದ ವೀಲ್ ಛೇರನ್ನು ತಾವೇ ತರುವುದು.
8. ಸ್ಪರ್ಧೆಗೆ ಒಮ್ಮೆ ನೋಂದಾಯಿಸಿದ ಕ್ರೀಡಾಪಟುಗಳ ಹೆಸರನ್ನು ಯಾವುದೇ ಕಾರಣಕ್ಕೂ ಬದಲಾಯಿಸುವಂತಿಲ್ಲ.
9. ಕ್ರೀಡಾಕೂಟದಲ್ಲಿ ಭಾಗವಹಿಸುವ ಎಲ್ಲಾ ಕ್ರೀಡಾಪಟುಗಳು ತಮ್ಮ ಸಂಸ್ಥೆಯವರು ನೀಡಿದ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಧರಿಸುವುದು.
10. ಕ್ರೀಡಾಪಟುಗಳು ಕ್ರೀಡಾಂಗಣದಲ್ಲಿ ಆಯೋಜಕರು ನೀಡಿದಂತಹ ಚೆಸ್ಟ್ ನಂಬರ್ ಧರಿಸುವುದು ಕಡ್ಡಾಯವಾಗಿರುತ್ತದೆ.
11. ಕ್ರೀಡೆಗಳಲ್ಲಿ ಭಾಗವಹಿಸುವ ಕ್ರೀಡಾಪಟುಗಳನ್ನು ಹೊರತುಪಡಿಸಿ ಮೈದಾನದಲ್ಲಿ ಬೇರೆ ಕ್ರೀಡಾಪಟುಗಳ ಪ್ರವೇಶವನ್ನು ನಿರ್ಬಂಧಿಸಲಾಗಿದೆ.
12. ದಿನಾಂಕ: 01.11.2023 ರಂದು ಬೆಳಗ್ಗೆ 11.00 ಗಂಟೆಯಿಂದ ಸಂಜೆ 05.00 ಗಂಟೆಯೊಳಗೆ ಎಲ್ಲಾ ಸ್ಪರ್ಧಾಳುಗಳು ಹಾಗೂ ಉಸ್ತುವಾರಿ ವಹಿಸಿದ ಸಂಸ್ಥೆಗಳ ಉಪನ್ಯಾಸಕರು/ ತಂಡದ ವ್ಯವಸ್ಥಾಪಕರು ಚಾಮುಂಡಿ ವಿಹಾರ ಕ್ರೀಡಾಂಗಣ, ಮೈಸೂರು ಇಲ್ಲಿ ವರದಿ ಮಾಡಿಕೊಳ್ಳುವುದು.
13. ತಂಡದ ವ್ಯವಸ್ಥಾಪಕರುಗಳು / ಉಪನ್ಯಾಸಕರು ದಿನಾಂಕ: 01/11/2023 ರ ಸಂಜೆ 5.30 ಗಂಟೆಗೆ ಕ್ರೀಡಾಂಗಣದ ಆವರಣದಲ್ಲಿ ಸಂಸ್ಥೆಯ ತಾತ್ಕಾಲಿಕ ಕಛೇರಿ ಬಳಿ ನಡೆಯುವ ಸಭೆಗೆ ಕಡ್ಡಾಯವಾಗಿ ಹಾಜರಾಗುವುದು.
14. ಕ್ರೀಡಾಕೂಟದಲ್ಲಿ ಭಾಗವಹಿಸುವ ಎಲ್ಲಾ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಕ್ರೀಡಾ ಮನೋಭಾವನೆಯಿಂದ ಶಿಸ್ತು ಹಾಗೂ ಸಂಯಮದಿಂದ ವರ್ತಿಸಬೇಕೆಂದು ಸೂಚಿಸಲಾಗಿದೆ.
15. ಕ್ರೀಡಾಕೂಟವನ್ನು ಯಶಸ್ವಿಯಾಗಿ ನಡೆಸಲು ಎಲ್ಲಾ ಪ್ರಾಂಶುಪಾಲರುಗಳು ಹಾಗೂ ತಂಡದ ವ್ಯವಸ್ಥಾಪಕರು/ಉಪನ್ಯಾಸಕರು ತಮ್ಮ ಸಹಕಾರವನ್ನು ನೀಡುವಂತೆ ಸೂಚಿಸಲಾಗಿದೆ.

Scanned with CamScanner

16. ಕ್ರೀಡಾಕೂಟದಲ್ಲಿ ಭಾಗವಹಿಸುವ ಸರ್ಕಾರಿ/ಅನುದಾನಿತ/ಖಾಸಗಿ ಸಂಸ್ಥೆಯವರು ಆಯಾ ಸಂಸ್ಥೆಯಿಂದ ಒಂದು ಕ್ರೀಡೆಗೆ ನೋಂದಣಿ ಶುಲ್ಕ ರೂ. 10 ರಂತೆ ಎಷ್ಟು ಕ್ರೀಡೆಗಳಲ್ಲಿ ಕ್ರೀಡಾಪಟುಗಳು ಭಾಗವಹಿಸುವರೋ ಅದಕ್ಕೆ ಅನುಗುಣವಾಗಿ ಹಣವನ್ನು ಕ್ರೀಡಾ ಆಯೋಜಕರಿಗೆ ಮುಂಗಡವಾಗಿ ಪಾವತಿಸಬೇಕು.
17. ಕ್ರೀಡಾಕೂಟವು ದಿನಾಂಕ:02/11/2023 ರಂದು ಪ್ರಾರಂಭವಾಗಲಿರುವುದರಿಂದ ಕ್ರೀಡಾಕೂಟದಲ್ಲಿ ಭಾಗವಹಿಸುವ ಎಲ್ಲಾ ಸ್ಪರ್ಧಾಳುಗಳು ಹಾಗೂ ತಂಡದ ವ್ಯವಸ್ಥಾಪಕರು/ ಉಪನ್ಯಾಸಕರು ಆ ದಿನ ಬೆಳಿಗ್ಗೆ 8.00 ಗಂಟೆಗೆ ಕ್ರೀಡಾಂಗಣದಲ್ಲಿ ಹಾಜರಿರತಕ್ಕದ್ದು.
18. ಪಥ ಸಂಚಲನಕ್ಕಾಗಿ ತಮ್ಮ ಸಂಸ್ಥೆಯ ಧ್ವಜವನ್ನು, ತಂಡದ ಸಮವಸ್ತ್ರ ಮತ್ತು ಸಂಬಂಧಿಸಿದ ವಸ್ತುಗಳನ್ನು ತರುವುದು.
19. ಕ್ರೀಡಾಪಟುಗಳ ವಯಸ್ಸು 24 ಕ್ಕೆ ಮೀರಿರಬಾರದು. ವಯಸ್ಸಿಗೆ ದಾಖಲಾತಿ ತರುವುದು.
20. ಪಾಲಿಟೆಕ್ನಿಕ್‌ಗಳಲ್ಲಿ ಅನುತ್ತೀರ್ಣರಾಗಿರುವ ಕ್ರೀಡಾಪಟುಗಳು ಕ್ರೀಡಾಕೂಟದಲ್ಲಿ ಭಾಗವಹಿಸುವಂತಿಲ್ಲ.
21. ಪಾಲಿಟೆಕ್ನಿಕ್‌ಗಳನ್ನು ಹೊರತುಪಡಿಸಿ ಬೇರೆ ಸಂಸ್ಥೆಗಳ ಕ್ರೀಡಾಪಟುಗಳು ಕ್ರೀಡಾಕೂಟದಲ್ಲಿ ಭಾಗವಹಿಸುವಂತಿಲ್ಲ.
22. ಕ್ರೀಡಾಪಟುಗಳು ತಮ್ಮ ಸಂಸ್ಥೆಯಿಂದ ನೀಡಿರುವ ಪರೀಕ್ಷಾ ನೋಂದಣಿ ಸಂಖ್ಯೆಯನ್ನು ತಪ್ಪದೇ ಹೆಸರಿನ ಮುಂದೆ ನಮೂದಿಸುವುದು.
23. ಕ್ರೀಡಾಪಟುಗಳ ವೈದ್ಯಕೀಯ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಪ್ರಾಂಶುಪಾಲರಿಂದ ದೃಢೀಕರಿಸಿ ನೊಂದಣಿ ಸಮಯದಲ್ಲಿ ಸಲ್ಲಿಸುವುದು.
24. ಕ್ರೀಡಾಪಟುಗಳ TA (To and Fro) ಮತ್ತು 01/11/2023 ರ ಬೆಳಗಿನ ಲಗುಉಪಹಾರ, ಮಧ್ಯಾಹ್ನದ ಊಟ ಮತ್ತು 03/11/2023 ರ ರಾತ್ರಿಯ ಊಟವನ್ನು ತಮ್ಮ ಸಂಸ್ಥೆಯ Sports Fundನಿಂದ ನಿರ್ವಹಿಸುವುದು.
25. ಮಹಿಳಾ ಕ್ರೀಡಾಪಟುಗಳಿಗೆ ಪ್ರತ್ಯೇಕವಾದ ವಸತಿ ವ್ಯವಸ್ಥೆ ಮಾಡಲಾಗುವುದು.
26. ಎಲ್ಲಾ ಪಾಲಿಟೆಕ್ನಿಕ್ (Govt /Govt Aided / Private) ಕ್ರೀಡಾಕೂಟದಲ್ಲಿ ಭಾಗವಹಿಸುವ ಸಂಸ್ಥೆಗಳಿಂದ ಕ್ರೀಡಾಪಟುಗಳೊಂದಿಗೆ ಒಬ್ಬ ಉಪನ್ಯಾಸಕರು/ ತಂಡದ ವ್ಯವಸ್ಥಾಪಕರು ಮತ್ತು ಮಹಿಳಾ ಕ್ರೀಡಾಪಟುಗಳೊಂದಿಗೆ ಒಬ್ಬ ಮಹಿಳಾ ಉಪನ್ಯಾಸಕಿ/ ತಂಡದ ವ್ಯವಸ್ಥಾಪಕರನ್ನು ನೇಮಿಸಲು ಪ್ರಾಂಶುಪಾಲರಿಗೆ ಸೂಚಿಸಲಾಗಿದೆ.
27. ಸಂಸ್ಥೆಯಿಂದ ಭಾಗವಹಿಸುವ ಕ್ರೀಡಾಪಟುಗಳಿಗೆ, ತಂಡದ ವ್ಯವಸ್ಥಾಪಕರುಗಳಿಗೆ/ಉಪನ್ಯಾಸಕರುಗಳಿಗೆ ವಸತಿ ಸೌಕರ್ಯವನ್ನು ಮಾತ್ರ ಒದಗಿಸಲಾಗುವುದು. ತಂಗಲು ಅಗತ್ಯವಿರುವ ಹಾಸಿಗೆ, ಹೊದಿಕೆ, ಕೊಠಡಿಯ ಬೀಗ, ಸೊಳ್ಳೆ ಪರದೆ (Mosquito Coil), ಸೂಟ್‌ಕೇಸ್ ಇತ್ಯಾದಿಗಳನ್ನು ತಾವೇ ತರುವುದು. ಹೊರಗಡೆ ವಸತಿ ಬಯಸುವವರು ತಮ್ಮ ಸ್ವಂತ ಖರ್ಚಿನಲ್ಲಿ ವ್ಯವಸ್ಥೆ ಮಾಡಿಕೊಳ್ಳತಕ್ಕದ್ದು.
28. ಸಂಸ್ಥೆಯಿಂದ ಭಾಗವಹಿಸುವ ಕ್ರೀಡಾಪಟುಗಳ/ವಿಕಲಚೇತನ ಕ್ರೀಡಾಪಟುಗಳ ಮಾಹಿತಿಗೆ ಸಂಬಂಧಪಟ್ಟಂತೆ ನಮೂನೆ 1,2,3ಅನ್ನು ದ್ವಿ ಪ್ರತಿಯಲ್ಲಿ ಭರ್ತಿ ಮಾಡಿ ಪ್ರಾಂಶುಪಾಲರ ಸಹಿಯೊಂದಿಗೆ ಕಡ್ಡಾಯವಾಗಿ ನೋಂದಣಿ ಸಮಯದಲ್ಲಿ ಸಲ್ಲಿಸಲು ವ್ಯವಸ್ಥಾಪಕರುಗಳು/ ಉಪನ್ಯಾಸಕರುಗಳು ಕ್ರಮವಹಿಸುವುದು.
29. ನೋಂದಣಿ ಅರ್ಜಿ ಜೊತೆಗೆ ಪ್ರವೇಶ ಶುಲ್ಕ ರೂ.15000/-ಗಳ ಡಿ.ಡಿ.ಯನ್ನು ಎಲ್ಲಾ ಖಾಸಗಿ ಪಾಲಿಟೆಕ್ನಿಕ್‌ಗಳು, ಪ್ರಾಂಶುಪಾಲರು, ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್, ಮೈಸೂರು ಇವರ ಹೆಸರಿನಲ್ಲಿ ತರತಕ್ಕದ್ದು, ಪ್ರವೇಶ ಶುಲ್ಕ ರಹಿತ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಜಂಟಿ ನಿರ್ದೇಶಕರು (ಸಿಡಿಸಿ)
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು

Scanned with CamScanner